SRI. S. R. BOMMAI.—Let the Hon.Minister verify the fact and if there is no stay order he should assure the House that he will take action against the officer concerned who has furnished this false information to this House. If there is no suit filed and there is no stay order and if such a reply is given it will be irresponsible and will be misleading the House.

MR. SPEAKER.—Please verify the fact.

SRI S. R. BOMMAI.—Within what time will he report back to the House ?

SRI P. F. RODRIGUES.—My report is that a suit has been filed in 1974 and the hon Member also agrees that a suit has been filed. The only difference of opinion is about the stay order. The hon.Member says there is no stay order. If there is no stay order, I shall see that action is taken and the sites are distributed.

MR. SPEAKER.—Question 907 held over.

Loss or Profit in Government silk filatures

921 SRI M. SIDDAMADAIAH (Kollegal).—Will the Minister for Sericulture and Horticulture be pleased to state —

(a) the names of Government Silk Filatures and the amount of Profit earned or the amount of loss sustained during 1976-197 and onwards;

(b) the action taken by the Government to wipe out the losses ?

SRI K. B. SHIVAIAH (Minister for Sericulture and Horticulture).—

(a) The details of net loss sustained by the Government silk Filatures during 1976-1977 and 1977-1978 are as follows.—

			(Rs. in lakhs)
1.	Govt. Silk Filature,	Kanakapura ...	16.72
2.	do	Mysore ...	18.98
3.	do	Kollegal ...	37.02
4.	do	T. Narasipur ...	43.53
5.	do	Santhemarahalli ...	24.20
6.	do	Chamarajanagar ...	21.60
7.	do	Mamballi ...	13.32
		Total Rs. ...	175.37

(b) The following measures have been taken by Government to wipe out the losses ...

1. trade representative have been appointed with certain conditions to sell the raw silk manufactured by the Government Silk Filatures and a long term agreement has been entered into with the consumers.

2. reviewing the monthly progress of work, of all the Silk Filatures and to give them certain guide-lines to prevent the losses.

ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾ ಎಲ್ಲ ಸಿಲ್ಕ್ ಫಿಲೇಚರ್‌ಗಳಿಂದಲೂ ಆಗಿರತಕ್ಕಂಥ ನಷ್ಟವನ್ನು ಹೇಳಿರುತ್ತೀರಿ, ಆದರೆ ಈ ರೀತಿಯಾಗಿ ನಷ್ಟವಾಗಲು ಕಾರಣವೇನು, ಯಾವ ಕ್ರಮದಿಂದ ಈ ರೀತಿ ನಷ್ಟವಾಗಿದೆ ಎಂಬುದನ್ನು ತಾವು ತಿಳಿಸಬೇಕೆಂದು ಕೇಳುತ್ತೇನೆ.

† ಶ್ರೀ ಕೆ. ಬಿ. ಶಿವಯ್ಯ.—ಸ್ವಾಮಿ ನಷ್ಟವಾಗುವುದಕ್ಕೆ ಹಲವಾರು ಕಾರಣಗಳಿವೆ ಈ ಮನೆಯಲ್ಲಿ ಇದೇರೀತಿ ಒಂದು ಪ್ರಶ್ನೆ ಕೇಳಿದಾಗ ಉತ್ತರವನ್ನು ಹೇಳಿರುತ್ತೇನೆ. ಈಗಲೂ ಕೂಡ ಹೇಳುವುದೇನೆಂದರೆ ಇಷ್ಟೊಂದು ನಷ್ಟಉಂಟಾಗಲು ಅಕ್ಯುಮಿಲೇಟೆಡ್ ಇಂಟರೆಸ್ಟ್ ಕೂಡ ಇದರಲ್ಲಿ ಸೇರಿದೆ. ಬಹುಶಃ ಇದರಿಂದ ಏನಾಗಿದೆ ಎಂದರೆ ಜಾಸ್ತಿ ನಷ್ಟವಾಗಿದೆ ಎಂದು ಕಾಣುತ್ತದೆ. ಇನ್ನು ಬೇರೆ ಕಾರಣವೆಂದರೆ ನಮ್ಮ ಫಿಲೇಚರ್‌ಗಳಲ್ಲಿ ಉಪಯೋಗಿಸುತ್ತಿರುವ ಯಂತ್ರಗಳು ಇನ್ನೂ ಹಳೆಯಕಾಲದವೇ ಆಗಿರುತ್ತದೆ. ಈ ಹಳೆಯಕಾಲದ ಯಂತ್ರಗಳನ್ನು ಸರ್ಕಾರದವರು ಆಧುನೀಕರಣ ಮಾಡಬೇಕೆಂದು ಈಗಾಗಲೇ ಒಂದು ತೀರ್ಮಾನಕ್ಕೆ ಬಂದಿದೆ. ಮತ್ತೆ ಫಿಲೇಚರ್‌ಗಳಲ್ಲಿ ಹೆಚ್ಚು ಜನ ಸಿಬ್ಬಂದಿಯನ್ನು ಇಟ್ಟುಕೊಂಡಿರುವುದು ಒಂದು ಕಾರಣವಾಗಿರುತ್ತದೆ. ಪ್ರೈವೇಟ್ ಗ್ರೇನೇಜ್‌ಗಳಲ್ಲಿ ಒಂದು ಭಾಗದಲ್ಲಿ ೨-೩ ಜನರು ಕೆಲಸಮಾಡುತ್ತಿದ್ದರೆ. ನಮ್ಮಲ್ಲಿ ೪ ಜನರು ಕೆಲಸಮಾಡುತ್ತಿರುತ್ತಾರೆ. ಮತ್ತೆ ನಮ್ಮಲ್ಲಿ ಹಳೆಯಕಾಲದ ಯಂತ್ರಗಳನ್ನೇ ಉಪಯೋಗಿಸುತ್ತಿರುವುದರಿಂದ ಉತ್ಪನ್ನವು ಕೂಡ ಕಡಿಮೆಯಿರುತ್ತದೆ. ನಮ್ಮಲ್ಲಿ ಒಸೂರು ಗ್ರಾಮ್ ತೆಗೆಯುವಷ್ಟರಲ್ಲಿ ಪ್ರೈವೇಟ್‌ನವರು ಒಂದು ಕೆ. ಜಿ. ಯಷ್ಟು ನೂಲನ್ನು ತೆಗೆಸುತ್ತಾರೆ. ಪ್ರೈವೇಟ್ ಗ್ರೇನೇಜ್‌ಗಳಲ್ಲಿ ಸಣ್ಣ ಸಣ್ಣ ಮಕ್ಕಳನ್ನು ಇಟ್ಟುಕೊಂಡು ಕೆಲಸಮಾಡಿಸುತ್ತಾರೆ. ಆದರೆ ನಾವು ಲೇಬರ್ ಆಕ್ಟ್ ಪ್ರಕಾರವಾಗಿ ಸಣ್ಣ ಸಣ್ಣ ಮಕ್ಕಳನ್ನು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ ನಾವು ಕೊಡತಕ್ಕಂಥ ಕೂಲಿ ಒಬ್ಬ ಮನುಷ್ಯನಿಗೆ ೧೨ ರೂಪಾಯಿಗಳನ್ನು ಕೊಡುತ್ತೇವೆ. ಆದರೆ ಅವರು ಕೊಡುವುದು ಮೂರು ರೂಪಾಯಿಗಳಿಂದ ಆರು ರೂಪಾಯಿಗಳವರೆಗೆ ಮಾತ್ರ ಕೊಡುತ್ತಾರೆ. ಮತ್ತೆ ನಮ್ಮಲ್ಲಿ ಜನರಲ್ ಮ್ಯಾನೇಜರ್ ಒಂದೆರಡು ಯೂನಿಟ್‌ಗಳಲ್ಲಿ ಬಿಟ್ಟರೆ ಉಳಿದವರೆಲ್ಲರೂ ಬಿಎಸ್‌ಸಿ ಗ್ರಾಜ್ಯುಯೇಟ್ಸ್ ಇರುತ್ತಾರೆ. ಆದರೆ ಪ್ರೈವೇಟ್‌ನವರು ಟೆಕ್ಸ್‌ಟೈಲ್ ಗ್ರಾಜ್ಯುಯೇಟ್ಸ್‌ಗಳನ್ನು ಇಟ್ಟುಕೊಂಡು ಹೆಚ್ಚಿನ ಮಟ್ಟದಲ್ಲಿ ಉತ್ಪನ್ನವನ್ನು ತೆಗೆಯಂತಾರೆ. ಇದನ್ನೂ ಕೂಡ ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡುತ್ತಿದೆ. ಈ ಎಲ್ಲ ಕಾರಣಗಳಿಂದಲೂ ಮತ್ತೆ ಮುಖ್ಯವಾಗಿ ಕಚ್ಚಾ ರೇಷ್ಮೆ ಗೂಡು ಮಾರ್ಕೆಟ್‌ನಲ್ಲಿ ಸಾಕಷ್ಟು ಸಿಕ್ಕದೆ ಇರುವುದರಿಂದಲೂ ಈ ರೀತಿಯಿಗಿ ಫಿಲೇಚರ್‌ಗಳಲ್ಲಿ ನಷ್ಟ ಉಂಟಾಗಲು ಕಾರಣವಾಗಿರುತ್ತದೆಂದು ತಿಳಿಸುತ್ತೇನೆ.

ಶ್ರೀ ಎಂ. ಸಿದ್ದಮಾದಯ್ಯ.— ತಾವು ಎಲ್ಲ ಸಿಲ್ಕ್ ಫಿಲೇಚರ್‌ಗಳಿಗೂ ಬೆಂಗಳೂರು ಡಿಸ್ಟ್ರಿಕ್ಟ್ ನಿಂದಲೇ ಗೂಡನ್ನು ಕೊಂಡು ಒದಗಿಸತಕ್ಕಂಥ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದೀರಿ, ವಿಶೇಷವಾಗಿ ಕೋಲಾರ ಜಿಲ್ಲೆಯಿಂದ ಗೂಡನ್ನು ಸಪ್ಲೈ ಮಾಡುತ್ತಿರುವಿರಿ, ನಿಮ್ಮ ಇಚ್ಛೆಯ ಪ್ರಕಾರ ಗೂಡನ್ನು ಕೊಂಡು ಎಲ್ಲ ಫಿಲೇಚರ್‌ಗಳಿಗೂ ಸಪ್ಲೈ ಮಾಡುತ್ತಿದ್ದರೂ ನಿಮಗೆ ಲಾಭ ಬರದೆ ಇರುವುದಕ್ಕೆ ಕಾರಣಗಳೇನು? ಸಣ್ಣ ಸಣ್ಣವರಿಗೆ ಲಾಭಬರುತ್ತಿದ್ದು ನಿಮಗೆ ಲಾಭ ಬರುತ್ತಿಲ್ಲವೆಂದರೆ ಇದಕ್ಕೆ ಕಾರಣವೇನು ತಿಳಿಸಬೇಕು.

ಶ್ರೀ ಕೆ. ಬಿ. ಶಿವಯ್ಯ .—ಪ್ರೈವೇಟ್‌ನವರು ನಡೆಸುವುದಕ್ಕೂ, ಸರ್ಕಾರದವರು ನಡೆಸುವುದಕ್ಕೂ ಏನು ವ್ಯತ್ಯಾಸವಿರುತ್ತದೆಂದು ವಿವರವಾಗಿ ಹೇಳಿರುತ್ತೇನಲ್ಲ, ನಷ್ಟವುಂಟಾಗಲು ಕಾರಣಗಳನ್ನೆಲ್ಲ ವಿವರವಾಗಿ ಹೇಳಿರುತ್ತೇನೆ. ಮಾನ್ಯ ಸದಸ್ಯರು ಅದನ್ನು ತಿಳಿಯಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಸಿದ್ದಮಾದಯ್ಯ.—ನಷ್ಟವನ್ನು ತುಂಬಲಿಕ್ಕೆ ವ್ಯಾಪಾರ ಪ್ರಚಾರಕರನ್ನು ನೇಮಕ ಮಾಡಿಕೊಂಡಿದ್ದೇವೆಂದು ಹೇಳಿರುತ್ತೀರಿ, ಇವರು ಯಾರು ಏನು ಎನ್ನುವುದು ಅರ್ಥವಾಗುತ್ತಿಲ್ಲ ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.— ಕಚ್ಚಾ ಸಿಲ್ಕ್ ರೇಷ್ಮೆ ಉತ್ಪನ್ನ ಮಾಡತಕ್ಕಂಥವರನ್ನು ಕ್ಯಾನ್‌ವಾಸಿಂಗ್ ಏಜೆನ್ಸಿ ಎಂದು ಕರೆಯುತ್ತೇವೆ. ಅವರ ಮುಖಾಂತರ ನಮ್ಮ ರೇಷ್ಮೆ ಉದ್ಯಮವನ್ನು ಮಾಡುತ್ತಾ ಇದ್ದೇವೆ. ಇದರಿಂದ ಹೆಚ್ಚಿನ ಬೆಳೆ ಬರಬಹುದು, ಪ್ರಚಾರ ಬರಬಹುದು ಎನ್ನುವ ದೃಷ್ಟಿಯಿಂದ ಇಟ್ಟು ಕೊಂಡಿರುತ್ತೇವೆ. ಇದನ್ನು ಒಂದು ರೀತಿ ಸ್ಯಾಂಪಲ್ ಆಗಿ ಮಾಡಿರುವಂಥಾದ್ದಾಗಿರುತ್ತದೆ. ಇದೇನು ಅಷ್ಟು ಹೆಚ್ಚಿನ ಪರಿಣಾಮ ಕೊಡುತ್ತಾ ಇಲ್ಲ.

ಶ್ರೀ ಜಿ. ರಾಜಂಗೌಡ.—ಸ್ವಾಮಿ, ತಾವು ಈಗ ಏನು ೭ ಸಿಲ್ಕ್ ಫಿಲೇಚರ್‌ಗಳನ್ನು ನಡೆಸುತ್ತಿರುವುದರಿಂದ ೧೭೫ ಲಕ್ಷ ರೂಪಾಯಿಗಳಷ್ಟು ನಷ್ಟ ಬಂದಿರುತ್ತದೆಂದು ತೋರಿಸಿರುತ್ತೀರಿ, ತಮ್ಮನ್ನು ಕೇಳುತ್ತೇನೆ ಈ ೭ ಸಿಲ್ಕ್ ಫಿಲೇಚರ್‌ಗಳನ್ನೂ ಒಂದು ವರ್ಷ ಸಂಪೂರ್ಣವಾಗಿ ಮುಚ್ಚಿ ಅಲ್ಲಿಯ ಕಾರ್ಮಿಕರಿಗೆ ವರ್ಷಪೂರ್ತಿ ಸಂಬಳವನ್ನು ಕೊಟ್ಟರೆ ಆಗ ಆಗತಕ್ಕಂಥ ನಷ್ಟಕ್ಕಿಂತ ಈಗ ಆಗಿರತಕ್ಕಂಥ ನಷ್ಟವೇ ಹೆಚ್ಚು ಎಂದು ಹೇಳುತ್ತೇನೆ. ಇದಕ್ಕೆ ತಮ್ಮ ಅಭಿಪ್ರಾಯವೇನೆಂದು ಕೇಳುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.— ಮಾನ್ಯ ಅಧ್ಯಕ್ಷರೆ ನಷ್ಟವಾಗಿರುವುದು ಮೊದಲೇ ಹೇಳಿದಹಾಗೆ ೮೮.೭೫ ಲಕ್ಷ ರೂಪಾಯಿಗಳು ಅಕ್ಯುಮಿಲೇಟೆಡ್ ಇಂಟರೆಸ್ಟ್ ಸೇರಿಕೊಂಡು ಆಗಿರುತ್ತದೆಂದು ಹೇಳಿರುತ್ತೇನೆ. ೧೭೫ ಲಕ್ಷ ರೂಪಾಯಿಗಳು ನಷ್ಟವಾಗಿರುತ್ತದೆಂದು ತಿಳಿದುಕೊಳ್ಳಬಾರದು' ಬಹುಶ: ಎರಡನೆ ಮಹಾ ಯುದ್ಧ ನಡೆದಂಥ ಕಾಲದಲ್ಲಿ ಸರ್ಕಾರದವರು ಈ ಎಲ್ಲ ಸಿಲ್ಕ್ ಫಿಲೇಚರ್‌ಗಳನ್ನು ವಹಿಸಿಕೊಂಡು ಯುದ್ಧಸಾಮಗ್ರಿಗಳಿಗೆ ಬೇಕಾಗಿರತಕ್ಕಂಥ ಪ್ಯಾರಾಚೂಟ್ ಬಟ್ಟೆಯನ್ನು ತಯಾರಿಸಬೇಕೆನ್ನುವ ದೃಷ್ಟಿಯಿಂದ ಗವರ್ನಮೆಂಟ್ ಇವುಗಳನ್ನು ನಡೆಸಿಕೊಂಡು ಬಂದಿರುತ್ತದೆ. ನಷ್ಟವನ್ನು ಸರಿದೂಗಿಸಬೇಕೆನ್ನುವುದು ಸರ್ಕಾರದ ಉದ್ದೇಶವೇ ಆಗಿರುತ್ತದೆ. ಬಹುಶ: ಇಲ್ಲಿ ಕಲಸಮಾಡತಕ್ಕಂಥ ಕಾರ್ಮಿಕರು ಏನು ಇರುತ್ತಾರೆ, ಅದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಜನ ಗಿರಿಜನರು, ದುರ್ಬಲ ವರ್ಗದವರೇ ಇರುತ್ತಾರೆ. ಅವರ ಹಿತದೃಷ್ಟಿಯಿಂದ ಫಿಲೇಚರ್‌ಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಫಿಲೇಚರ್‌ಗಳನ್ನು ಮುಚ್ಚುವುದಾದರೆ ೬-೭ ಸಾವಿರ ಜನರು ನಿರ್ಗತಿಕರಾಗುತ್ತಾರೆ ಆದ್ದರಿಂದ ಪ್ರೈವೇಟಿನವರು ಯಾವ ರೀತಿ ಹೆಚ್ಚಿನ ಉತ್ಪನ್ನ ಮಾಡುತ್ತಾರೆ ಅದೇ ರೀತಿಯಲ್ಲಿ ಉಂಟಾಗುತ್ತಿರುವ ನಷ್ಟವನ್ನು ಸರಿದೂಗಿಸಲು ಕೆಲಸ ಮಾಡಬೇಕೆನ್ನುವುದು ಸರ್ಕಾರದ ಇಚ್ಛೆಯಾಗಿರುತ್ತದೆಂದು ಹೇಳುತ್ತೇನೆ.

10.00 A.M.

SRI A. K. ABDUL SAMAD.— The Hon. Minister stated that they want to improve the machinary and procurement of raw materials. Will the Minister consider constituting a committee of legislators who know about this industry, about men and matters, to guide the Government?

SRI K. B. SHIVIAH.— We are seriously thinking of constituting a corporation. After formation of such a corporation we will really make use of these people.

ಶ್ರೀ ಎಂ, ಸಿದ್ದಪ್ಪಾದಯ್ಯ.— ಮಾನ್ಯ ಮಂತ್ರಿಗಳು ಮೆಷಿನರಿ ಕೆಟ್ಟುಹೋಗಿದೆ. ಆದ್ದರಿಂದ ತುಂಬಾ ನಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ಮಾರ್ಕೆಟ್‌ನಲ್ಲಿ ಪರ್ಚೇಸ್ ಮಾಡುವಾಗ ಅದರಲ್ಲಿ ಲೋಪದೋಷ ಇದೆ ಎಂಬುದು ಕಂಡುಬರುತ್ತಿದೆ. ಅದಕ್ಕೆ ತಪ್ಪಿತಸ್ಥರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಿ.

ಶ್ರೀ ಕೆ. ಬಿ. ಶಿವಯ್ಯ.— ನಾವು ಇಷ್ಟರಲ್ಲೇ ಒಂದು ರೆಗ್ಯುಲೇಷನ್ ಮಾಡಬೇಕೆಂದು ಮಾಡಿದ್ದೇವೆ ಮಾರ್ಕೆಟ್‌ನಲ್ಲಿ ಗೂಡುಗಳನ್ನು ಗ್ರೇಡಿಂಗ್ ಮಾಡುವುದು, ಮತ್ತು ಅದಕ್ಕೆ ಒಂದು ಕನಿಷ್ಟ ಬೆಲೆಯನ್ನು ಕಂಡುಹಿಡಿದು ಅದರಲ್ಲಿ ಕೊಂಡುಕೊಳ್ಳುವವರಿಗೆ ಯಾವ ನಷ್ಟವೂ ಆಗದಂತೆ ಮಾಡುವುದು—ಈ ರೀತಿ ಕಾರ್ಯಕ್ರಮ ಜಾರಿಗೆ ತರಬೇಕೆಂದಿದ್ದೇವೆ. ಅದನ್ನು ತಂದಾಗ ಬಹುಶ: ಮಾರ್ಕೆಟ್‌ನಲ್ಲಿ ಫಿಲೇಚರ್ ರೆಪ್ರಸೆಂಟೇಟೀವ್ಸ್ ಏನು ಮೋಸ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ ಅದೂ ಕೂಡ ತಪ್ಪುತ್ತದೆ.